

ಅರುಣ ಪಿ. ಭಟ್ಟ

# ವಾರಭವಿಷ್ಯ: 04.04.2024ರಿಂದ 10.04.2024ರವರೆಗೆ




ಹೊಸ ಕೆಲಸಗಳಿಗೆ ಪ್ರಯತ್ನಿಸಲು ಸೂಕ್ತ ಕಾಲ. ಅದ್ಭುತ ಯಶಸ್ಸಿನೊಂದಿಗೆ ವಾರದ ಆರಂಭ ಆಗುವ ಸಾಧ್ಯತೆ ಇದೆ. ಕಲೆ, ಬರವಣಿಗೆ, ವೈದ್ಯಕೀಯ, ನಿರ್ಮಾಣ, ಭದ್ರತೆ ಮತ್ತು ತಂತ್ರಜ್ಞಾನದಂಥ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಗ್ರಹಗತಿಗಳು ಅನುಕೂಲಕರವಾಗಿವೆ. ಹೊಸ ಕೆಲಸ ದೊರೆಯುವ ಸಾಧ್ಯತೆ ಹೆಚ್ಚಿರುತ್ತದೆ. ಶುಭದಿನ 10. ಗೋಪೂಜೆ ಮಾಡಿರಿ. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.




ನೀವು ಮಾಡುವ ಕೆಲಸದಲ್ಲಿ ಉತ್ತಮ ಫಲಿತಾಂಶ ವೃದ್ಧಿಯಾಗಲಿದೆ. ಕುಟುಂಬದಲ್ಲಿ ಸಂತೋಷ ಇರುತ್ತದೆ. ಇನ್ನೊಬ್ಬರಿಗೆ ಬುದ್ಧಿವಾದ ಹೇಳುವ ಮೊದಲು ವ್ಯಕ್ತಿ ಕೇಳುಗನಾಗಿದ್ದಾನೆಯೇ ಎಂಬುದನ್ನು ಅರಿತುಕೊಳ್ಳಿ. ಆದಾಯ ಹೆಚ್ಚಳಕ್ಕೆ ಅವಕಾಶ ಇದೆ. ವಾರದ ಆರಂಭದಲ್ಲಿ ಮನೆಯಲ್ಲಿ ಸಂತೋಷ. ಉದ್ಯೋಗದಲ್ಲಿ ಯಶಸ್ಸು ನಿಮ್ಮಮನೆಯ ಬಾಗಿಲು ಬಡಿಯುತ್ತದೆ. ಶುಭದಿನ 05. ಹನುಮಾನ್ ಚಾಲಿಸ್ ಪಠಿಸಿರಿ.




ವಾರದ ಮೊದಲಾರ್ಧದಲ್ಲಿ ಗ್ರಹಗತಿಗಳು ನಿಮಗೆ ಅನುಕೂಲಕರವಾಗಿವೆ. ಅತಿ ಮುಖ್ಯವಾದ ಕೆಲಸಗಳನ್ನು ಮಾಡಿ. ನಿಮ್ಮಲ್ಲಿನ ಜಡತ್ವ ಕರಗಿ ಹೋಗಲಿದೆ. ನಿಮ್ಮ ವಿನಯದ ಸ್ವಭಾವದಿಂದ ಹೆಚ್ಚಿನ ಹೆಸರು ಸಂಪಾದನೆ ಮಾಡಲಿದ್ದೀರಿ. ಸಂಗಾತಿಯ ಬಯಕೆಗಳಿಗೆ ನೀವು ಸಮ್ಮತಿಯ ವಾಗ್ದಾನ ನೀಡಲಿದ್ದೀರಿ. ಕೌಟುಂಬಿಕವಾಗಿ ನೆಮ್ಮದಿಯಾಗಿ ಇರುತ್ತೀರಿ. ಶುಭದಿನ 06. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಮಾಡುವ ಕಾರ್ಯದಲ್ಲಿ ಅನಗತ್ಯವಾಗಿ ತೊಂದರೆ ಬರಬಹುದು. ಆರ್ಥಿಕ ಮೂಲಗಳಿಗೆ ತಡೆಯಾಗುವ ಸಾಧ್ಯತೆ ಇದೆ. ಕಾನೂನು ವ್ಯಾಜ್ಯಗಳಲ್ಲಿ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನ ಮಾಡುತ್ತೀರಿ. ಹೂಡಿಕೆ, ವಿದೇಶಿ ವ್ಯವಹಾರದಲ್ಲಿ ನೀವಂದುಕೊಂಡಂಥ ಫಲಿತಾಂಶ ದೊರೆಯಲಿದೆ. ಆರ್ಥಿಕ ಸ್ಥಿತಿ ಸಾಧಾರಣ ಎಂಬುದಕ್ಕಿಂತ ಸ್ವಲ್ಪ ಉತ್ತಮವಾಗಿರುತ್ತದೆ. ಶುಭದಿನ. 08. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವಿವೇಚನಾರಹಿತ ಹೂಡಿಕೆಗಳಿಂದ ಧನ ನಷ್ಟ. ನಿಮ್ಮದೇ ವಿಚಾರಗಳು ನಡೆಯಬೇಕೆಂಬ ವಾದವು ಅತಿಶಯೋಕ್ತಿಯಾಗಿ ಕಾಣಬಹುದು. ಉತ್ಸಾಹ ಮಾಮೂಲಿಗಿಂತ ಹೆಚ್ಚಾಗಿ ಇರುತ್ತದೆ. ಮನೆಯಲ್ಲಿ ಶುಭ ಕಾರ್ಯ ಆಯೋಜಿಸುವ ಸಾಧ್ಯತೆ ಇದೆ. ನಿಮಗೆ ವಹಿಸಿದ ಜವಾಬ್ದಾರಿಗಳನ್ನು ಸಹ ತುಂಬ ಸಲೀಸಾಗಿ, ಅಚ್ಚುಕಟ್ಟಾಗಿ ಪೂರ್ಣಗೊಳಿಸುತ್ತೀರಿ. ಶುಭದಿನ 09. ವಿಷ್ಣು ಸಹಸ್ರನಾಮ ಓದಿರಿ.




ಕೆಲಸದಲ್ಲಿ ಹೆಚ್ಚಿನ ವಿಳಂಬ. ಕೆಲ ವಿಚಾರಗಳಲ್ಲಿ ಅತಿಯಾದ ಆಸಕ್ತಿ ತೋರಿಸುವುದು ಒಳ್ಳೆಯದಲ್ಲ. ಯೋಜನೆಗಳ ವಿಸ್ತರಣೆಗೆ ಅವಕಾಶಗಳು ಸಿಗುವ ಸಾಧ್ಯತೆ. ವ್ಯವಹಾರ ವಿಸ್ತರಣೆಗೆ ಆಲೋಚನೆ ಮಾಡುತ್ತೀರಿ. ವಿದೇಶ ವ್ಯವಹಾರ, ದಾಖಲೆ ಪತ್ರಗಳಿಗೆ ಸಂಬಂಧಿಸಿದಂತೆ ನಿಮಗೆ ಅನುಕೂಲ ಆಗಲಿದೆ. ಈ ಹಿಂದಿನ ಪರಿಸ್ಥಿತಿ ಸುಧಾರಣೆಯಾಗಲಿದೆ. ಶುಭದಿನ 10. ನವದುರ್ಗಾ ಆರಾಧನೆ ಮಾಡಿರಿ.




ಹಿರಿಯರಿಗೆ ಗೌರವ ನೀಡುವುದು ಒಳ್ಳೆಯದು. ನಿಮ್ಮ ದುಡುಕು ದೊಡ್ಡಪೆಟ್ಟನ್ನು ನೀಡಬಹುದಾಗಿದೆ. ನಿಮ್ಮ ಮನೋಕಾಮನೆಗಳನ್ನು ಆದಷ್ಟು ನಿಯಂತ್ರಣ ಮಾಡುವುದು ಒಳ್ಳೆಯದು. ಸ್ಪರ್ಧಾತ್ಮಕ ಕ್ಷೇತ್ರದಲ್ಲೂ ಯಶಸ್ಸು ದೊರೆಯಲಿದೆ. ನಿಮ್ಮ ಶ್ರಮಕ್ಕೆ ಉತ್ತಮ ಫಲಿತಾಂಶ ಸಿಗಲಿದೆ. ಆರೋಗ್ಯದಲ್ಲಿ ಚೇತರಿಕೆ, ವೈಯಕ್ತಿಕ ಸಂಬಂಧದಲ್ಲಿ ಸಂತೋಷ ಕಾಣಿಸಿಕೊಳ್ಳುತ್ತದೆ. ಶುಭದಿನ 06. ಆದಿತ್ಯ ಹೃದಯ ಪಠಿಸಿರಿ.




ರಾಜಿ ಪಂಚಾಯಿತಿಗಳಲ್ಲಿ ಹೋಗದಿರುವುದು ತುಂಬಾ ಸೂಕ್ತ. ಸುಖಾಸುಮ್ಮನೆ ಕದನಕ್ಕೆ ಬರುವಂತಹ ಜನರ ದರ್ಶನ. ಸಂಗಾತಿಯ ಜೊತೆಗೆ ಖರೀದಿ ಪ್ರಕ್ರಿಯೆಗಳನ್ನು ಮಾಡಲು ಇಚ್ಛಿಸುತ್ತೀರಿ. ನಿಮ್ಮ ಸಾಮರ್ಥ್ಯ ಕಂಡು ಇತರರು ಬೆರಗಾಗುತ್ತಾರೆ. ಸಾರ್ವಜನಿಕ ಮನ್ನಣೆ ದೊರೆಯುವ ಅವಕಾಶಗಳು ನಿಚ್ಚಳವಾಗಿವೆ. ಮುಖ್ಯವಾದ ಹುದ್ದೆಗೆ ನಿಮ್ಮ ಹೆಸರನ್ನು ಸೂಚಿಸುವ ಸಾಧ್ಯತೆ. ಶುಭದಿನ 08. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.




ಗ್ರಹಗತಿಗಳು ನಿಮ್ಮ ಕಡೆಗೆ ಶುಭ ದೃಷ್ಟಿ ಬೀರುತ್ತಿವೆ. ಬಾಕಿ ಇರುವ ನಿಮ್ಮ ಕೆಲಸಗಳಿಗೆ ಪರಿಹಾರ ಸಿಗಲಿದೆ. ಉದ್ಯೋಗ ಹಾಗೂ ವೈಯಕ್ತಿಕ ಸಂಗತಿಗಳಲ್ಲಿ ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ತುಂಬ ಮುಖ್ಯವಾದ ಚರ್ಚೆ ಕೂಡ ನಡೆಸುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಹೆಚ್ಚು ಸಮಾಧಾನ ಹಾಗೂ ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ಶುಭದಿನ 09. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹೊಸ ಯೋಜನೆಗೆ ಈಗಿನಿಂದಲೇ ಸಿದ್ಧತೆ ನಡೆಸುವುದು ಒಳ್ಳೆಯದು. ಪಶುಸಂಗೋಪನೆ, ಕೃಷಿ ಚಟುವಟಿಕೆಗಳಲ್ಲಿ ಉತ್ತಮವಾದ ಬೆಳವಣಿಗೆ ಕಂಡುಬರುತ್ತದೆ. ಆತ್ಮೀಯರ ಬಳಿ ಆರ್ಥಿಕ ಸಹಾಯ ಕೇಳುವ ಸಾಧ್ಯತೆ ಇದೆ. ವಾರದ ಶುರುವಿನಲ್ಲಿ ದೂರದ ಪ್ರದೇಶಗಳಿಗೆ ಪ್ರಯಾಣ ಮಾಡುವ ಸಾಧ್ಯತೆ ಇದೆ. ವ್ಯವಹಾರಗಳು ಈ ಅವಧಿಯಲ್ಲಿ ನಿಮಗೆ ಅನುಕೂಲಕರವಾಗಿ ಇವೆ. ಶುಭದಿನ 08. ಕಾಲಭೈರವನ ಸೇವೆ ಮಾಡಿರಿ.




ಸೋಲಿನಿಂದ ಗೆಲುವಿನ ಕಡೆಗೆ ಪ್ರಯಾಣ ಬೆಳೆಸುವಿರಿ. ಸಂತೋಷದ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಕುಟುಂಬದಲ್ಲಿ ಅನಿರೀಕ್ಷಿತವಾಗಿ ಸಂಕಷ್ಟ ಎದುರಾಗಬಹುದು. ಮನೆಗೆ ನೆಂಟರಿಷ್ಟರ ಆಗಮನ. ದೈಹಿಕ ಸದೃಢತೆ ಬಗ್ಗೆ ಹೆಚ್ಚಿನ ಗಮನ ನೀಡುವ ಸಾಧ್ಯತೆ ಇದೆ. ಹೊಸದಾಗಿ ಕೆಲಸಕ್ಕಾಗಿ ಪ್ರಯತ್ನ ಮಾಡುತ್ತಿರುವವರು ಶ್ರಮವನ್ನು ಮುಂದುವರಿಸಬೇಕು. ಶುಭದಿನ 07. ಶನಿಸ್ತೋತ್ರ ಪಠಿಸಿರಿ.




ಕೌಟುಂಬಿಕ ಸಮಸ್ಯೆಗಳು ಸರಿಹೋಗಲಿವೆ. ಉದ್ಯೋಗದ ಸ್ಥಿತಿಗತಿಗಳು ಚೇತರಿಕೆಯತ್ತ ಸಾಗುತ್ತದೆ. ನಿಮ್ಮ ಕ್ರಿಯಾಶೀಲತೆಯಿಂದ ಹೊಸತಾದ ಕಲ್ಪನೆಗಳೊಂದಿಗೆ ಸಾಗುವಿರಿ. ಉದ್ಯೋಗದಲ್ಲಿ ಪ್ರಗತಿ ಸಾಧ್ಯತೆ ಇದೆ. ನಿಮ್ಮ ವಿರೋಧಿಗಳನ್ನು ಈ ಅವಧಿಯಲ್ಲಿ ಮಣಿಸುತ್ತೀರಿ. ಹಣಕಾಸು ಹೂಡಿಕೆ ಲಾಭದಾಯಕವಾಗಿ ಇರುತ್ತದೆ. ನಿಮ್ಮ ಆರೋಗ್ಯದ ಬಗ್ಗೆ ಗಮನ ನೀಡಿ. ಶುಭದಿನ 09. ಗಣಪತಿಗೆ ದೂರ್ವಾರ್ಚನೆ ಮಾಡಿರಿ.